**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 270/2024</u>**

**ಫಿರ್ಯಾದುದಾರರು:**

ಶಾಖಾ ವ್ಯವಸ್ಥಾಪಕರು,
ದೈವಜ್ಞ ಕೋ.ಆಫ್.ಕ್ರೇಡಿಟ್
ಸೊಸೈಟಿ ಲಿ.

**– ವಿರುದ್ಧ –**

**ಆರೋಪಿತರು:**

ಶ್ರೀ.ಫಕ್ಕೀರಪ್ಪ ತಂದೆ ತಿಮ್ಮಣ್ಣ ತಗಡಿಮನಿ,
ಪ್ರಾಯಃ 50 ವರ್ಷ, ಉಃ ರೈತಾಬಿ,
ಸಾಃ ಚಿಗಳ್ಳಿ, ಪೋಃ ಚಿಗಳ್ಳಿ,
ತಾಃ ಮುಂಡಗೋಡ. ಉತ್ತರ ಕನ್ನಡ.

**<u>ಆಪಾದನೆ</u>**

ಆರೋಪಿತರಾದ ನೀವು ಫಿರ್ಯಾದಿ ಸೊಸೈಟಿಯಲ್ಲಿ ಸ್ವ – ಉದ್ಯೋಗದ ಸಾಲವನ್ನು ಕೇಳಿ ರೂ.2,49,500/–ಗಳನ್ನು ದಿನಾಂಕ 18–01–2022 ರಂದು ಪಡೆದುಕೊಂಡು, ತದನಂತರ ನೀವು ನಿಗದಿತ ಸಮಯಕ್ಕೆ ಸದ್ರಿ ಹಣವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ, ಕೊನೆಗೆ 10/05/2024 ರಂದು ಸದ್ರಿ ಸಾಲದ ಹಣ ಹಾಗೂ ಅದರ ಮೇಲಾಗುವ ಬಡ್ಡಿಯ ಹಣ ಮರು ಪಾವತಿ ಮಾಡುತ್ತೇನೆಂದು ತಿಳಿಸಿ ಕೆನರಾ ಬ್ಯಾಂಕ ಮುಂಡಗೋಡ ಶಾಖೆದಲ್ಲಿ ನಿಮಗೆ ಸೇರಿದ ಚೆಕ್ ನಂ.257057 ಒಟ್ಟು ರೂ.3,33,570/–ಗಳ ಮೊತ್ತಕ್ಕೆ ಭವಿಷ್ಯದ ನಗದಿಕರಣದ ಚೆಕನ್ನು ದಿನಾಂಕ 16/05/2024 ಎಂದು ನಮೂದುಮಾಡಿ ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿ ಸೊಸೈಟಿಯವರು ಸದರಿ ದಿನಾಂಕ ದಂದು ಸದ್ರಿ ಚೆಕ್ಕನ್ನು ಕೆ.ಡಿ.ಸಿ.ಸಿ. ಬ್ಯಾಂಕ ಮುಂಡಗೋಡ ಶಾಖೆಗೆ ನಗಧೀಕರಣಕ್ಕಾಗಿ ಚೆಕನ್ನು ಹಾಜರಪಡಿಸಿದಾಗ, "ಸಾಕಷ್ಟು ಹಣವಿಲ್ಲ" ಅನ್ನುವ ಬ್ಯಾಂಕಿನ ಮೇಮೋ ದೊಂದಿಗೆ 18/05/2024 ರಂದು ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರ ಸಂಘವು ದಿನಾಂಕಃ 27/05/2024 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ನಿಮಗೆ ದಿನಾಂಕ 29/05/2024 ಜ್ಯಾರಿಯಾಗಿದ್ದರೂ ಸಹಿತ ಚೆಕ್ಕನ ರಕಂನ್ನು ವಾಪಸ್ಸು ಮಾಡದೆ, ಆ ಮೂಲಕ ನೀವು ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 29-09-2025

ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ.